ದಿನಾಂಕಃ 15-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಃ ವಾದಿ ಪರ ಶ್ರೀ ಎಮ್ ಬಿ ಬಿ ವಕೀಲರಿಂದಃ

3. ಈ ದಾವೆಯನ್ನು ನನ್ನ ತಮ್ಮ ಬಸಪ್ಪ ಮತ್ತು ಪವಾಡಪ್ಪ ಸೇರಿ ನನ್ನ, ನನ್ನ ತಂದೆಯ ಹಾಗೂ ನನ್ನ ಮಗನ ವಿರುದ್ಧ ಹಾಕಿರುತ್ತಾರೆ. ದಾವಾದಲ್ಲಿ ಸಿದ್ಧಲಿಂಗಪ್ಪನ ವಂಶಾವಳಿ ಬರೆದಿರುತ್ತಾರೆ ಎಂದರೆ ಸರಿ. ನನ್ನ ಅಜ್ಜ ಸಂಗಪ್ಪನಿಗೆ ಒಟ್ಟು ಸಿದ್ಧಲಿಂಗಪ್ಪ ಮತ್ತು ಚನ್ನಪ್ಪ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಸಿದ್ಧಲಿಂಗಪ್ಪನಿಗೆ ಗಂಗಮ್ಮ ಎಂಬ ಹೆಂಡತಿ ಇದ್ದಳು ಎಂದರೆ ಸರಿ. ಅವರಿಗೆ ಒಟ್ಟು ಆರು ಜನ ಮಕ್ಕಳು. ಅವರಲ್ಲಿ ಐದು ಗಂಡು ಮತ್ತು ಒಂದು ಹೆಣ್ಣು ಮಗಳು. ಸದರಿಯವರ ಹೆಸರುಗಳು. ಸಂಗಪ್ಪ ಅಂದರೆ ನಾನು, ಬಸಪ್ಪ, ಪವಾಡಪ್ಪ, ನಿಂಗಪ್ಪ, ಶಿವಾನಂದ ಮತ್ತು ನೀಲವ್ವ. ಸಿದ್ಧಲಿಂಗಪ್ಪ ಮತ್ತು ಗಂಗಮ್ಮ ಇಬ್ಬರು ತೀರಿಕೊಂಡಿರುತ್ತಾರೆ. ಚನ್ನಪ್ಪನ ಹೆಂಡತಿಯ ಹೆಸರು ನೀಲವ್ವ. ಅವರಿಬ್ಬರೂ ಸಂತಾನ ಇಲ್ಲದೇ ತೀರಿಕೊಂಡಿರುತ್ತಾರೆ ಎಂದರೆ ಸರಿ. ಸಿದ್ಧಲಿಂಗಪ್ಪನಿಗೆ ವಾದಿಯರು ಮತ್ತು 2 ರಿಂದ 4 ನೇ ಪ್ರತಿವಾದಿಗಳು ವಾರಸುದಾರರು ಎಂದರೆ ಸರಿ. ಚನ್ನಪ್ಪನಿಗೂ ಸಹ ಈ ಮೇಲೆ ಹೇಳಿದವರೇ ವಾರಸುದಾರರು ಎಂದರೆ ಸರಿ. ಈ ಮೇಲೆ ಹೇಳಿದವರೆಲ್ಲ ಒಂದೇ ಕುಟುಂಬದ ಸದಸ್ಯರು ಎಂದರೆ ಸರಿ. ವಾದಿಯವರು ಮತ್ತು ಪ್ರತಿವಾದಿಯರ ಒಟ್ಟಿಗೆ ಸಾಗುವಳಿ ಮಾಡಿಕೊಂಡು ಬರುತ್ತಿದ್ದೇವೆ ಎಂದರೆ ಸರಿಯಲ್ಲ, 40 ವರ್ಷಗಳಿಂದ ವಾಸ ಮಾಡಿಕೊಂಡು ಕಬ್ಜಾ ವಹಿವಾಟು ಮಾಡಿಕೊಂಡು ಬರುತ್ತಿದ್ದೇವೆ ಎಂದು ನುಡಿಯುತ್ತಾರೆ.

4. ಸಂಗಪ್ಪ ಮತ್ತು ಸಿದ್ಧಲಿಂಗಪ್ಪ ವಾಟ್ನಿ ಮಾಡಿಕೊಂಡ ಬಗ್ಗೆ ದಾಖಲೆ ಹಾಜರು ಪಡಿಸಿದ್ದೀರಾ ಎಂದರೆ ಇಲ್ಲ. ಸಿದ್ಧಲಿಂಗಪ್ಪ ಜೀವಂತವಿದ್ದಾಗ ವಾದಿಯರು ಮತ್ತು ನಾವು ವಾಟ್ನಿ ಮಾಡಿಕೊಂಡಿಲ್ಲ ಎಂದರೆ ಸರಿ. ಸಿದ್ಧಲಿಂಗಪ್ಪ ಹಾಗೂ ಚನ್ನಪ್ಪನಿಗೆ ಕಮತಾ ಹೊರತುಪಡಿಸಿ ಬೇರೆ ಆದಾಯ ಇಲ್ಲ ಎಂದರೆ, ಸಿದ್ಧಲಿಂಗಪ್ಪ ವ್ಯಾಪಾರ ಮಾಡುತ್ತಿದ್ದ ಎಂದು ನುಡಿಯುತ್ತಾರೆ. ಸಿದ್ಧಲಿಂಗಪ್ಪ ವ್ಯಾಪಾರ ಮಾಡುತ್ತಿದ್ದ ಎಂದು ತೋರಿಸಲು ದಾಖಲೆ ಹಾಜರು ಪಡಿಸಿದ್ದೀರಾ ಎಂದರೆ ಇಲ್ಲ. ವ್ಯಾಪಾರ ಮಾಡುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂಬರ 108 ಕ್ಷೇತ್ರ 4 ಎಕರೆ ಜಮೀನು ಸಂಗಪ್ಪ ಖರೀದಿ ಹಿಡಿದ ಬಗ್ಗೆ ದಾಖಲೆ ಹಾಜರು ಪಡಿಸಿದ್ದೀರಾ ಎಂದರೆ ಇಲ್ಲ. ನಿಡಿ. 1 ಮತ್ತು 3 ರ ಮೃತ್ಯು ಪತ್ರಗಳನ್ನು ರೂ. 500/- ಸ್ಟ್ಯಾಂಪ್ ಪತ್ರದಲ್ಲಿ ಬರೆಯಲಾಗಿದೆ. ಮೃತ್ಯು ಪತ್ರವನ್ನು ಯಾವ ತಾರೀಖು, ತಿಂಗಳು ಮತ್ತು ಇಸ್ವೀಯಂದು ಬರೆಯಲಾಗಿದೆ ಎಂದು

ಹೇಳಲಾಗುವುದಿಲ್ಲ, ಮೃತ್ಯು ಪತ್ರಗಳನ್ನು ಪಡೋಸಿ ಬರೆದಿರುತ್ತಾರೆ. ನಿಡಿ. 1 ಮತ್ತು 3 ರ ಸಾಕ್ಷಿದಾರರು ನಾವು ಕುಂದಗೋಳಕ್ಕೆ ಬಂದಿಲ್ಲ, ಹೊಲದಲ್ಲಿ ಮತ್ತು ಮನೆಯಲ್ಲಿ ಸಹಿ ಮಾಡಿದ್ದೇವೆ ಎಂದು ಸಾಕ್ಷಿ ನುಡಿದಿದ್ದಾರೆ ಎಂದರೆ ಅವರವರು ಹೊಂದಾಣಿಕೆ ಆಗಿ ಹೇಳಿದ್ದಾರೆ ಎಂದು ನುಡಿಯುತ್ತಾರೆ. ಸಾಕ್ಷಿದಾರರು ಹೊಂದಾಣಿಕೆ ಆಗಿ ಸುಳ್ಳು ಹೇಳಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ. 1 ರ ಮೃತ್ಯು ಪತ್ರವನ್ನು ಬರೆಯುವಾಗ ಸಾಕ್ಷಿದಾರರಾದ ಮಾರುತಿ ಕಲ್ಲೂರ ಮತ್ತು ಮಾಬುಸಾಬ ಮುಲ್ಲಾ ಬಂದಿದ್ದರು, ಬೆರಳಚ್ಚು ಮಾಡಿದವರ ಹೆಸರು ಗೊತ್ತಿಲ್ಲ, ಪಡೋಸಿ ಮತ್ತು ಕಾಳೆ ವಕೀಲರು ನನ್ನ ಮಾಹಿತಿಯ ಪ್ರಕಾರ ಬೆರಳಚ್ಚು ಮಾಡಿಸಿದ್ದಾರೆ.

5. ನಿಡಿ. 1 ನ್ನು ನಾನು, ಕಲ್ಲೂರ ಮತ್ತು ಮುಲ್ಲಾ ಸೇರಿಕೊಂಡು ಸಿದ್ಧಲಿಂಗಪ್ಪ ತೀರಿಕೊಂಡ ನಂತರ ದಾಖಲೆ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಿಡಿ. 1 ಮೃತ್ಯು ಪತ್ರ ಬರೆಯುವಾಗ ಸಿದ್ಧಲಿಂಗಪ್ಪ ಸದರಿ ಸ್ವತ್ತಿನ ಮಾಲೀಕ ಮತ್ತು ಕಬ್ಜಾದಾರರಾಗಿರಲಿಲ್ಲ ಎಂದರೆ ಸರಿಯಲ್ಲ. ದಾವಾ ದಾಖಲಾದ ನಂತರ ಸಿದ್ಧಲಿಂಗಪ್ಪ ತೀರಿಕೊಂಡಿದ್ದಾನೆ ಎಂದರೆ ಸರಿ. ಸಿದ್ಧಲಿಂಗಪ್ಪ ತನ್ನ ಕೈಪಿಯತ್ ನಲ್ಲಿ ತಾನು ಖರೀದಿಸುವ ಸ್ವತ್ತನ್ನು ಸಂಗಪ್ಪನಿಗೆ ಕೊಡುತ್ತಿದ್ದೇನೆ ಎಂದು ಬರೆಸಿದ್ದಾರೆ ಎಂದರೆ ಗೊತ್ತಿಲ್ಲ.

6. ನಿಡಿ. 2 ರ ದಾನ ಪತ್ರವನ್ನು ಯಾವ ತಾರೀಖು, ತಿಂಗಳು ಮತ್ತು ಇಸ್ವೀಯಂದು ಬರೆಯಲಾಗಿದೆ ಎಂದರೆ ಗೊತ್ತಿಲ್ಲ. ಎಷ್ಟು ರೂ. ಸ್ಟಾಂಪ್ ಪೇಪರನಲ್ಲಿ ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ, ನನ್ನ ತಂದೆ ಖರೀದಿ ಮಾಡಿರುತ್ತಾರೆ. ನಾನು, ಈರಣ್ಣ ಭದ್ರಾಪೂರ, ನನ್ನ ತಂದೆ ಸಿದ್ಧಲಿಂಗಪ್ಪ, ದ್ಯಾಮಣ್ಣ ದೊಡ್ಡಮನಿ ಅವರು ಸಬ್ ರಿಜಿಸ್ಟ್ರಾರ್ ಕಚೇರಿಗೆ ಬಂದಿದ್ದರು. ನಿಡಿ. 2 ರಲ್ಲಿ ಸಿದ್ಧಲಿಂಗಪ್ಪನಿಗೆ 80 ವರ್ಷ ವಯಸ್ಸು ಎಂದು ಕಾಣಿಸಲಾಗಿದೆ ಎಂದರೆ ಸರಿ. ಸಿದ್ಧಲಿಂಗಪ್ಪನಿಗೆ ಆ ಸಮಯದಲ್ಲಿ ಕಣ್ಣು ಕಾಣುತ್ತಿರಲಿಲ್ಲ, ಓಡಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನಿಡಿ. 2 ರ ದಾನ ಪತ್ರದ ಸ್ವತ್ತನ್ನು ಸಿದ್ಧಲಿಂಗಪ್ಪ ಬರೆದುಕೊಡಲು ಆತ ಸದರಿ ಸ್ವತ್ತಿನ ಮಾಲೀಕ ಮತ್ತು ಕಬ್ಜಾದಾರರಾಗಿರಲಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಸ್ವತಃ ಹೇಳುತ್ತಾರೆ ನಂತರ ತಂದೆ ಸ್ವಂತ ಗಳಿಸಿದ ಸ್ವತ್ತು. ನಿಡಿ. 2 ರಲ್ಲಿ ಸಿದ್ಧಲಿಂಗಪ್ಪ ತಾನು ಸ್ವಂತ ಗಳಿಸಿದ ಆಸ್ತಿಯಂದು ಬರೆದಿಲ್ಲ ಎಂದರೆ ಸರಿ. ಸಿದ್ಧಲಿಂಗಪ್ಪನಿಗೆ ವಯಸ್ಸಾಗಿದ್ದು ಅದನ್ನು ದುರುಪಯೋಗ ಪಡಿಸಿಕೊಂಡು ನಾನು, ನನ್ನ ಮತ್ತು ಮತ್ತು ಸಾಕ್ಷಿದಾರರು ನಿಡಿ. 2 ನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

7. ನಿಡಿ. 3 ನ್ನು ಬರೆಯುವಾಗ ಈರಣ್ಣ ಭದ್ರಾಪೂರ, ಮಲ್ಲಪ್ಪ ಹಳ್ಳಿ, ಯಲ್ಲಪ್ಪ ಅಮ್ಮಿನಭಾವಿ, ಕೃಷ್ಣಗೌಡ ಪಾಟೀಲ ಸಾಕ್ಷಿದಾರರಾಗಿದ್ದರು, ಈ ಮೇಲೆ ಹೇಳಿದವರು ನ್ಯಾಯಲಾಯದಲ್ಲಿ ಬಂದು ಸಾಕ್ಷಿ ನುಡಿದಿದ್ದಾರೆ. ನಿಡಿ. 3 ಮೃತ್ಯು ಪತ್ರ ಬರೆಯುವಾಗ ಚನ್ನಪ್ಪ ಸದರಿ ಸ್ವತ್ತಿನ ಸಂಪೂರ್ಣ ಮಾಲೀಕ ಮತ್ತು ಕಬ್ಜಾದಾರರಾಗಿರಲಿಲ್ಲ ಎಂದರೆ ಸರಿಯಲ್ಲ. ದಾವಾ ದಾಖಲಾಗುವ ಪೂರ್ವದಲ್ಲಿ ಚನ್ನಪ್ಪ ತೀರಿಕೊಂಡಿದ್ದಾನೆ ಎಂದರೆ ಸರಿ. ನಾನು, ನನ್ನ ತಂದೆ ಚನ್ನಪ್ಪ ತೀರಿಕೊಂಡ ನಂತರ ನಿಡಿ. 3 ನ್ನು ಖೊಟ್ಟಿಯಾಗಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಿಡಿ. 3 ನ್ನು ಯಾರು ಬೆರಳಚ್ಚು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಡಿ. 3 ಕ್ಕೆ ಸಾಕ್ಷಿದಾರರು ಇದ್ದಲ್ಲಿಗೆ ಹೋಗಿ ನಾವು ಸಹಿ ಮಾಡಿಸಿಕೊಂಡು ಬಂದಿದ್ದೇನೆ ಎಂದರೆ ಸರಿಯಲ್ಲ. ನಿಡಿ. 3 ರ ಸಾಕ್ಷಿದಾರರು ಕುಂದಗೋಳಕ್ಕೆ ಬಂದಿಲ್ಲ ಹಾಗೂ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಚನ್ನಪ್ಪ ಸಿದ್ಧಲಿಂಗಪ್ಪನಿಗಾಗಲಿ ಅಥವಾ ಬೇರೆಯವರ ಹೆಸರಿಗೆ ಆಗಲಿ ಮೃತ್ಯು ಪತ್ರ ಬರೆದಿಲ್ಲ ಎಂದರೆ ಸರಿಯಲ್ಲ. ಚನ್ನಪ್ಪ ದಿಃ 29-08-2013 ರಂದು ಕುಂದಗೋಳಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ನಿಡಿ. 3 ರ ಹೆಬ್ಬಟ್ಟಿನ ಗುರುತು ಚನ್ನಪ್ಪನದಲ್ಲ ಎಂದರೆ ಸರಿಯಲ್ಲ. ನಿಡಿ. 1 ರ ಹೆಬ್ಬಟ್ಟಿನ ಗುರುತು ಸಿದ್ಧಲಿಂಗಪ್ಪನದಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯೂ ಸಹ ಜೀವಂತವಿದ್ದಾಗ ಕುಂದಗೋಳಕ್ಕೆ ದಿಃ 15-01-2020 ರಂದು ಬಂದಿಲ್ಲ, ಯಾರ ಹೆಸರಿಗೂ ಸಹ ಮೃತ್ಯು ಪತ್ರವನ್ನು ಬರೆದು ಕೊಟ್ಟಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಯಾದ ಕಾರಣ ಸಿದ್ಧಲಿಂಗಪ್ಪ ಮತ್ತು ಚನ್ನಪ್ಪ ಅವರಿಗೆ ಯಾವುದೇ ದಾಖಲೆ ಬರೆದುಕೊಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಒಟ್ಟು ಕುಟುಂಬದಲ್ಲಿ ಇದ್ದಾಗ ಜಮೀನಿನ ಮೇಲೆ ಬ್ಯಾಂಕ ಲೋನ ಪಡೆದಿದ್ದೀರಾ ಎಂದರೆ ಸಾಕ್ಷಿ ಅವರವರ ಹೆಸರಿಗೆ ಆದ ಮೇಲೆ ಲೋನ ಪಡೆದಿದ್ದಾಗಿ ನುಡಿಯುತ್ತಾರೆ. ಜಮೀನಿನ ಮೇಲೆ ಪಡೆದ ಸಾಲದ ಹಣವನ್ನು ಮನೆತನದ ಅವಶ್ಯಕತೆ ಬಳಸಿದ್ದೇವೆ ಎಂದರೆ ಸರಿಯಲ್ಲ. ಮೃತು ಪತ್ರ ಹಾಗೂ ದಾನ ಪತ್ರದಲ್ಲಿ ಕಾಣಿಸಿದ ಆಸ್ತಿಗಳ ಮೇಲೆ ಬ್ಯಾಂಕ ಭೋಜಾ ಇತ್ತು ಎಂದರೆ ಮೊದಲು ಇತ್ತು, ಸದರಿ ಭೋಜಾವನ್ನು ತುಂಬಿದ್ದೇವೆ ಎಂದು ನುಡಿಯುತ್ತಾರೆ. ನಿಡಿ. 1 ರಿಂದ 3 ರ ದಾಖಲೆಗಳಲ್ಲಿ ಭೋಜಾ ಇರುವ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿ.

8. ಪ್ರತಿವಾದ ಪತ್ರ ಹಾಗೂ ಸಾಕ್ಷಿಯ ಮುಖ್ಯ ವಿಚಾರಣೆಯನ್ನು ಬರೆಯಲು ಮಾಹಿತಿಯನ್ನು ನಾನು ವಕೀಲರಿಗೆ ಕೊಟ್ಟಿದ್ದೇನೆ. ಪ್ರತಿವಾದ ಪತ್ರ ಕಂಡಿಕೆ 5 ರಲ್ಲಿ ಬರೆಸಿದಂತೆ ವಾಟ್ನಿ ಮಾಡಿಕೊಂಡ ಬಗ್ಗೆ ದಾಖಲೆ ಹಾಜರು ಪಡಿಸಿದ್ದೀರಾ ಎಂದರೆ ಇಲ್ಲ. ಉತಾರ ಹಾಜರು ಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಸಹೋದರನ ನಡುವೆ ಯಾವುದೇ ವಾಟ್ನಿ ಪತ್ರ ಆಗಿಲ್ಲ ಎಂದರೆ ಸರಿ.

ಪ್ರತಿವಾದ ಪತ್ರದ ಕಂಡಿಕೆ 6 ರಲ್ಲಿ ಸಿದ್ಧಲಿಂಗಪ್ಪ ಮತ್ತು ಚನ್ನಪ್ಪ ಖರೀದಿ ಹಿಡಿದ ಬಗ್ಗೆ ಬರೆಸಿದ್ದು, ಆ ಸಂಬಂಧ ದಾಖಲೆ ಹಾಜರು ಪಡಿಸಿದ್ದೀರಾ ಎಂದರೆ ಇಲ್ಲ. ಚನ್ನಪ್ಪ ಮತ್ತು ಸಿದ್ಧಲಿಂಗಪ್ಪನ ಸ್ವಯಾರ್ಜಿತ ಆಸ್ತಿ ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ಸಿದ್ಧಲಿಂಗಪ್ಪನಿಗೆ ಒಟ್ಟು 10-15 ಜನ ಮೊಮ್ಮಕ್ಕಳು. ಸಿದ್ಧಲಿಂಗಪ್ಪನಿಗೆ ಎಲ್ಲ ಮೊಮ್ಮಕ್ಕಳ ಮೇಲೆ ಪ್ರೀತಿ ಇರುತ್ತದೆ ಎಂದರೆ ನನ್ನ ಮಗನ ಮೇಲೆ ಹೆಚ್ಚು ಪ್ರೀತಿ ಇತ್ತು ಎಂದು ನುಡಿಯುತ್ತಾರೆ. ಪ್ರೀತಿ ಇದ್ದ ಕಾರಣ ಮೃತ್ಯು ಪತ್ರ ಮತ್ತು ದಾನ ಪತ್ರ ನನ್ನ ತಂದೆ ನನ್ನ ಮಗನ ಹೆಸರಿಗೆ ಬರೆದುಕೊಟ್ಟದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚನ್ನಪ್ಪ ಜೀವಂತ ಇರುವವರೆಗೂ ಸಿದ್ಧಲಿಂಗಪ್ಪನ ಜೊತೆ ಯಾವುದೇ ವಾಟ್ನಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಕೈಪಿಯತ್ ನ ಕಂಡಿಕೆ 9 ರಲ್ಲಿ ಬರೆದಂತೆ  ವಾಟ್ನಿ ಆದ ಬಗ್ಗೆ ಯಾವುದೇ ಕಾಗದ ಪತ್ರ ಹಾಜರು ಮಾಡಿಲ್ಲ ಎಂದರೆ ಸರಿ. ವಾಟ್ನಿ ಆಗದೇ ಇದ್ದರು ವಾಟ್ನಿ ಆಗಿದೆ ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಹಾಕುವ ಪೂರ್ವದಲ್ಲಿ ವಾದಿಯರು ವಾಟ್ನಿ ಮಾಡಿಕೊಡುವಂತೆ ನಮ್ಮನ್ನು ಕೇಳಿದ್ದರು ಎಂದರೆ ಸರಿ. ಮನೆಯ ಹಿರಿಯ ವ್ಯಕ್ತಿ ನಾನು ಎಂದರೆ ಸರಿ. ನಾನು ಮತ್ತು ನನ್ನ ತಂದೆ ವಾಟ್ನಿ ಮಾಡಿ ಕೊಡದ ಕಾರಣ ವಾದಿಯರು  ಈ ದಾವಾ ಹಾಕಿದ್ದಾರೆ ಎಂದರೆ ಸರಿ. ನಾನು ವಾದಿಯರಿಗೆ ಆಸ್ತಿ ಕೊಡಬಾರದು ಎಂದು ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ **7** ರಿಂದ **10** ನೇ ಪ್ರತಿವಾದಿಗಳ ಪರ ಪಾಟೀ ಸವಾಲಿಗೆ ಸಮಯ ಕೋರಿದ್ದು**,** ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ.